ಜನ ನನಗಾಗಿ ನಾನು ಬರೆಯುತ್ತೇನೆ ಎನ್ನುತ್ತಾರೆ. ಅದು ಭಯಂಕರವಾದ ಆತ್ಮರತಿ ಅನ್ನಿಸುತ್ತದೆ. ನಿಮ್ಮ ಪುಸ್ತಕವನ್ನು ವಿಮರ್ಶಾತ್ಮಕ ಅಂತರದೊಂದಿಗೆ ಓದುವುದು ನಿಮಗೆ ತಿಳಿದಿದ್ದರೆ ನೀವು ಉತ್ತಮ ಲೇಖಕಿ/ಕ, ಸಂಪಾದಕಿ/ಕ ಆಗಬಲ್ಲಿರಿ. ಕ್ರಿಯೆಟಿವ್ ರೈಟಿಂಗ್ ಕಲಿಸುವಾಗ ಯಾವಾಗಲೂ ನಿಮ್ಮ ಬರವಣಿಗೆಯಿಂದ ದೂರ ನಿಂತು ಅದನ್ನು ವಿಮರ್ಶಾತ್ಮಕವಾಗಿ ನೋಡುವುದನ್ನು ಕಲಿಯಬೇಕು ಎಂದು ಹೇಳುತ್ತಿರುತ್ತೇನೆ. ನಿಮ್ಮದೇ ಬರವಣಿಗೆಯನ್ನು ದೂರನಿಂತು ಅದೇ ಮೊದಲ ಸಲವೇನೋ ಎನ್ನುವಂತೆ ಓದಬೇಕು. ನಿಮ್ಮದೇ ಬರವಣಿಗೆಯ ಮೋಹಕ್ಕೆ ಬೀಳಬಾರದು.

ಎಂದು ಊಹಿಸಬಹುದು. ಆದರೆ, ಹಾಗೆ ಹೇಳದೆ ಬಿಟ್ಟ ತಕ್ಷಣ ಅವಳನ್ನು ವ್ಯಕ್ತಿಯಾಗಿ ಇನ್ನಷ್ಟು ಸಂಕೀರ್ಣವಾಗಿ ಚಿತ್ರಿಸಬಹುದು.

◆ **'Beloved'** (ಕಾದಂಬರಿ) ಬರೆಯಲು ಸಾಕಷ್ಟು ಗುಲಾಮರ ಕಥನಗಳನ್ನು ಓದಿರಬೇಕಲ್ಲವೇ?

ಮಾಹಿತಿಗಾಗಿ ಅವುಗಳನ್ನು ಓದಲಿಲ್ಲ. ಏಕೆಂದರೆ, ನನಗೆ ಗೊತ್ತಿತ್ತು, ಅದನ್ನು ಬರೆದವರು ತಮಗನ್ನಿಸಿದ್ದನ್ನೆಲ್ಲ ಹೇಳಲು ಸಾಧ್ಯವಿರಲಿಲ್ಲ. ಅವರಿಗೆ ಆಶ್ರಯ ನೀಡಿದ ಬಿಳಿಜನರಿಗೆ ಅದು ಇಷ್ಟವಾಗುತ್ತಿರಲಿಲ್ಲ. ಅವರು ತಮ್ಮ ಓದುಗರನ್ನು ಪರಕೀಯರನ್ನಾಗಿ ಮಾಡಲು ಸಾಧ್ಯವಿರಲಿಲ್ಲ. ಹಾಗಾಗಿ, ಕೆಲವು ವಿಷಯಗಳ ಬಗ್ಗೆ ಅವರು ಮೌನವಹಿಸಬೇಕಾಯಿತು. ತಮ್ಮ ಸ್ಥಿತಿಯ ಭಯಾನಕತೆಯನ್ನು ಅವರು ಬಹಿರಂಗಪಡಿಸಲಿಲ್ಲ. ನೋಡಿ, ಗುಲಾಮತನ ಎನ್ನುವುದು ಭಯಾನಕ. ಅದನ್ನು ಕೊನೆಗೊಳಿಸೋಣ ಎಂದಷ್ಟೇ ಹೇಳುತ್ತಿದ್ದರು. ಅವರ ಕಥನಗಳಿಗೆ ಪ್ರಾಮುಖ್ಯತೆಯನ್ನೇ ಕೊಡಲಿಲ್ಲ. ಗುಲಾಮತನ ಎನ್ನುವುದು ಬಹಳ ಅಸಹ್ಯಕರ, ವೈಯುಕ್ತಿಕ ಆದರೂ ಸಾರ್ವಜನಿಕ; ಹೀಗೇಕೆ ಎಂದು ಅರ್ಥ ಮಾಡಿಕೊಳ್ಳಲು ಯತ್ನಿಸಿದೆ.

ಕೆಲವು ದಾಖಲೆಗಳನ್ನು ಓದುವಾಗ ಬಹಳ ಕಡೆ **the bit**(ಗುಲಾಮರ ಮುಖವಾಡ)ನ ಪ್ರಸ್ತಾಪವಿತ್ತು. ಇದನ್ನು ಗುಲಾಮರು ಮಾತಾಡದೆ/ಪ್ರತಿರೋಧ ತೋರದೆ ಕೆಲಸ ಮಾಡಲಿ ಎಂದು, ಅವರನ್ನು ಶಿಕ್ಷಿಸಲು ಅವರ ಬಾಯಿಗೆ ತೊಡಿಸಲಾಗುತ್ತಿತ್ತು. ಆ ವಸ್ತು ಹೇಗಿತ್ತು ಎಂದು ನನಗೆ ಗೊತ್ತಿರಲಿಲ್ಲ. ಕಡೆಗೊಂದು ದಿನ ಒಬ್ಬರು ಅದನ್ನು ವಿವರಿಸಿದಾಗ ಅಷ್ಟು ಭಯಾನಕವಾದದ್ದನ್ನು ನಾನು ನೋಡೇ ಇಲ್ಲ ಎಂದೆ. ಆ ವಸ್ತು ಹೇಗಿತ್ತು ಎನ್ನುವುದನ್ನು ಕಲ್ಪಿಸಿಕೊಳ್ಳಲು ನನ್ನಿಂದಾಗಲಿಲ್ಲ. ಅದು ಕುದುರೆಗಳಿಗೆ ತೊಡಿಸುವಂತಹದ್ದೇ ಅಥವ ಬೇರೆ ಬಗೆಯದೋ?

ಅಕಸ್ಮಾತ್ತಾಗಿ ಪುಸ್ತಕವೊಂದರಲ್ಲಿ ಗಂಡ ತನ್ನ ಹೆಂಡತಿಯನ್ನು ಹಿಂಸಿಸುತ್ತಿರುವ ಚಿತ್ರವೊಂದು ಕಣ್ಣಿಗೆ ಬಿತ್ತು. ಈ ವಸ್ತು ವಂಶಪಾರಂಪರ್ಯವಾಗಿ ಹರಿದುಬರುತ್ತದೆ ಎನ್ನುವುದು ಗೊತ್ತಾಯಿತು. ಈ ವಸ್ತು ಅಂಗಡಿಯಲ್ಲಿ ಸಿಗುತ್ತಿರಲಿಲ್ಲ. ಅದನ್ನು ಯಾರಿಗೆ ಬೇಕೋ ಅವರೇ ತಯಾರಿಸಿ ಅದನ್ನು ವ್ಯಕ್ತಿಗೆ ತೊಡಿಸಬೇಕಿತ್ತು. ಹಾಗಾಗಿ, ಅದು ಮಾಡಿದವನು ಹಾಗೂ ತೊಡಿಸಿಕೊಂಡವನನ್ನು ಒಳಗೊಂಡ ವೈಯುಕ್ತಿಕ ಕ್ರಿಯೆಯಾಗಿತ್ತು. ಅದನ್ನು ವಿವರಿಸಿದರೆ ಓದುಗನಿಗೆ ಅದರ ಅನುಭವ ಆಗುವುದು ಸಾಧ್ಯವಿಲ್ಲ ಅನ್ನಿಸಿತು. ಆ ಮುಖವಾಡವನ್ನು ಕೇವಲ ಐತಿಹಾಸಿಕ ಸತ್ಯ ಎಂದುಕೊಂಡರೆ ಸಾಲದು, ಅದನ್ನು ಕಲ್ಪಿಸಿಕೊಳ್ಳುವುದು ಅಗತ್ಯ ಎನ್ನುವುದು ಮನದಟ್ಟಾಯಿತು. ಓದುಗರಿಗೆ ಗುಲಾಮಗಿರಿ